ಎರಡು ಅನುಗ್ರಹಗಳು. ಅವುಗಳ ವಿಷಯದಲ್ಲಿ ಅನೇಕ ಜನರು ನಷ್ಟದಲ್ಲಿದ್ದಾರೆ: ಆರೋಗ್ಯ ಮತ್ತು ಬಿಡುವು

ಇಬ್ನ್ ಅಬ್ಬಾಸ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಎರಡು ಅನುಗ್ರಹಗಳು. ಅವುಗಳ ವಿಷಯದಲ್ಲಿ ಅನೇಕ ಜನರು ನಷ್ಟದಲ್ಲಿದ್ದಾರೆ: ಆರೋಗ್ಯ ಮತ್ತು ಬಿಡುವು." [صحيح] [رواه البخاري]

ಅಲ್ಲಾಹು ಮನುಷ್ಯನಿಗೆ ನೀಡಿದ ಎರಡು ಮಹಾ ಅನುಗ್ರಹಗಳ ಬಗ್ಗೆ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ತಿಳಿಸಿದ್ದಾರೆ. ಅನೇಕ ಜನರು ಅದರಲ್ಲಿ ನಷ್ಟವನ್ನು ಅನುಭವಿಸುತ್ತಾರೆ. ಏಕೆಂದರೆ ಅವರು ಅವುಗಳನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸುವುದಿಲ್ಲ. ಒಬ್ಬ ವ್ಯಕ್ತಿಗೆ ಆರೋಗ್ಯ ಮತ್ತು ಬಿಡುವಿನ ಸಮಯವು ಒಟ್ಟಿಗೆ ದೊರೆತು, ಅವನು ಸತ್ಕರ್ಮಗಳನ್ನು ಮಾಡಲು ಸೋಮಾರಿತನ ತೋರಿದರೆ, ಅವನು ನಷ್ಟ ಅನುಭವಿಸುವವನು. ಇದು ಹೆಚ್ಚಿನ ಜನರ ಪರಿಸ್ಥಿತಿಯಾಗಿದೆ. ಆದರೆ ಅವರು ತಮ್ಮ ಬಿಡುವಿನ ಸಮಯ ಮತ್ತು ಆರೋಗ್ಯವನ್ನು ಅಲ್ಲಾಹನಿಗೆ ವಿಧೇಯತೆ ತೋರುವ ಸತ್ಕರ್ಮಗಳಲ್ಲಿ ವಿನಿಯೋಗಿಸಿದರೆ, ಅವರು ಲಾಭ ಗಳಿಸುತ್ತಾರೆ. ಏಕೆಂದರೆ ಇಹಲೋಕವು ಪರಲೋಕದ ಹೊಲವಾಗಿದೆ. ಇಲ್ಲಿ ಒಂದು ವ್ಯಾಪಾರವಿದ್ದು, ಅದರ ಲಾಭವು ಪರಲೋಕದಲ್ಲಿ ಕಾಣಿಸುತ್ತದೆ. ಬಿಡುವಿನ ನಂತರ ಕೆಲಸದ ಸಮಯವು ಬರುತ್ತದೆ ಮತ್ತು ಆರೋಗ್ಯದ ನಂತರ ಅನಾರೋಗ್ಯ ಕಾಡುತ್ತದೆ. ವೃದ್ಧಾಪ್ಯ ಒಂದೇ ಇದ್ದರೂ ಅದು ಸಾಕು.

http://www.sunnah.global/hadeeth/kn/show/5449